ಮಾತು ಮಾತಿನಲ್ಲಿ ಒಂದು ದಿನ ತೊಟ್ಟಿಯವರು ನನ್ನನ್ನು ನೋಡಿ "ಚಿಕ್ಕ ಸ್ವಾಮಿಗೆ ಒಂದು ತೊಟ್ಟಿ ಮಾಡಿ ಕೊಡಲೇ?" ಎಂದು ಕೇಳಿದರು. ನನಗೆ ನಗು ಬಂದಿತು.

"ನಾನೇನು ಹಸು ಕರುನೋ, ಎಮ್ಮೆ ಕರುನೋ, ನನಗೇಕೆ ತೊಟ್ಟಿ?" ಎಂದು ಕೇಳಿದೆ.

"ಕುಡಿಯೋ ತೊಟ್ಟಿ ಅಲ್ಲ ಸ್ವಾಮಿ. ಸ್ನಾನ ಮಾಡೋ ತೊಟ್ಟಿ, ಸ್ನಾನ ಮಾಡೋ ತೊಟ್ಟಿ" ಅವರು ಎರಡು ಸಲ ಒತ್ತಿ ಹೇಳಿದರು.

"ಸ್ನಾನ ಮಾಡೋದಿಕ್ಕೆ ತೊಟ್ಟಿಯೇ?" ನಂಬಲಾಗದೆ ನಾನು ಅವರ ಮುಖವನ್ನು ನೋಡಿದೆ.

"ಪರಂಗಿಯವರೆಲ್ಲಾ ಹಾಗೇನೇ ಸ್ನಾನ ಮಾಡೋದು ಚಿಕ್ಕಸ್ವಾಮಿ. ತೊಟ್ಟಿಗೆ ನೀರು ಸುರಿದು, ಒಳಗೆ ಇಳೀತಾರೆ ಹೊಳೆ ಕೆರೆಯಲ್ಲಿ ಇಳಿಯೋತರ ತಣ್ಣಗಿರುತ್ತೆ..."

ಅವರ ಮಾತುಗಳನ್ನು ನಂಬಲಾಗಲಿಲ್ಲ. ನಂಬದೆ ಇರಲೂ ಆಗಲಿಲ್ಲ. ಜತೆಯಲ್ಲಿಯೇ ಅಪ್ಪನಿಗೆ ಅವೆಲ್ಲಾ ಹಿಡಿಸುವುದೋ ಹಿಡಿಸದೋ ಎಂಬ ಹೆದರಿಕೆಯೂ ಇತ್ತು.

"ಬೇಡ, ಬೇಡ ಅಪ್ಪಾ ಬೈತಾರೆ..." ಎಂದೆ.

"ನಾನು ಗುಟ್ಟಾಗೆ ಮಾಡ್ತೀನಿ. ಅವರ ಬಳಿ ಹೇಳಿಬಿಟ್ಟೇ ಮಾಡ್ತೀನಿ. ಅದರಲ್ಲಿ ಕುಳಿತು ಸ್ನಾನ ಮಾಡೋವಾಗ ಚಿಕ್ಕ ಸ್ವಾಮಿ ಈ ಕರುಪ್ಪನನ್ನ ನೆನಪು ಮಾಡಿಕೋಬೇಕು, ಅದೇ ನನ್ನ ಆಸೆ" ಎಂದ ತೊಟ್ಟಿಯವರ ಕಣ್ಣಿನ ಅಂಚು ಒಂದು ಕ್ಷಣ ನನ್ನಮೇಲೆ ತಾಕಿ ಅಗಲಿತು.

ಚಲಿಸುವ ಅವರ ಬೆರಳುಗಳನ್ನು ನೋಡುತ್ತಲೇ ಕುಳಿತಿದ್ದೆ. ನಂತರ "ಅದಕ್ಕೆಲ್ಲಾ ದೊಡ್ಡ ಕಲ್ಲು ಬೇಕಲ್ಲ. ಎಲ್ಲಿ ಸಿಗುತ್ತೆ?" ಎಂದು ಕೇಳಿದೆ.

"ಸಿಗುತ್ತೆ ಚಿಕ್ಕ ಸ್ವಾಮಿ. ಪಾತಾಳದಲ್ಲಿದ್ದರೂ ನಾನು ತೆಗೆದುಕೊಂಡು ಬರ್ತೀನಿ..."

ತೊಟ್ಟಿಯ ಕೆಲಸವನ್ನು ಮುಗಿಸಿ ಅಂದು ಹೊರಗೆ ಹೋದವರು ಸಂಜೆ ಕತ್ತಲಾಗುವ ಸಮಯದಲ್ಲಿ ಹಿಂತಿರುಗಿ ಬಂದರು. ಅವರ ಹಿಂದೆ ಒಂದು ಎತ್ತಿನ ಗಾಡಿ ನಿಂತಿತ್ತು. ಗಾಡಿಯೊಳಗೆ ದೊಡ್ಡ ಗಾತ್ರದ ಒಂದು ಕಲ್ಲಿತ್ತು. ಕೊಳದ ಜಲಾಶಯದ ತೂಬಿನ ಬಳಿ ಸಿಕ್ಕಿದ್ದಾಗಿ ಹೇಳಿದರು. ಅವರು "ಹೇಳಿದ ಕೆಲಸವನ್ನು ಬಿಟ್ಟು ಬೇರೇ ಕೆಲಸವನ್ನೆಲ್ಲ ಯಾತಕ್ಕೆ ಮಾಡ್ತಾರೆ?" ಎಂದು ಅಪ್ಪ ಬೇಸರಪಟ್ಟುಕೊಂಡರು. ಬೇಡ ಎನ್ನಲಿಲ್ಲವಲ್ಲ ಸದ್ಯ ಅಷ್ಟಕ್ಕೆ ನೆಮ್ಮದಿಯಾಗಿತ್ತು.

ಕೆಲಸ ತೊಡಗಿ ಐದಾರು ದಿನಗಳಲ್ಲಿಯೇ ಸ್ನಾನದ ತೊಟ್ಟಿ ರೂಪತಾಳತೊಡಗಿತು. ದಿನೇದಿನೇ ಕನಸುಗಳು ಮತ್ತೆಮತ್ತೆ ಬಂದವು. ನೀರು ತುಂಬಿದ ತೊಟ್ಟಿಯೊಳಗೆ ಕುಳಿತು ಸ್ನಾನ ಮಾಡುವ ಹಾಗೆ. ನಿದ್ದೆ ಮಾಡುವಂತೆ. ಹಿತ್ತಲ ಕಡೆ ಹೋಗುವ ಸಮಯಗಳಲ್ಲಿ ತೊಟ್ಟಿಯನ್ನು ಮುಟ್ಟಿ ನೋಡುವ ಆಸೆಯನ್ನು ನನ್ನಿಂದ ತಡೆದುಕೊಳ್ಳಲಾಗಲೇ ಇಲ್ಲ.

ತೊಟ್ಟಿಯವರ ಜತೆ ಕುಳಿತು ಮಾತನಾಡಲು ತೊಡಗಿದರೆ ಹೊತ್ತು ಹೋಗುವುದೇ ತಿಳಿಯದು. ಆರಂಭದಲ್ಲಿ ಅವರ ಮುಂದೆ ಹೋಗಲು ಹಿಂಜರಿದ ಅತ್ತೆಯರು ಸಹ, ಸಂಕೋಚ ತೊರೆದು ಸಹಜವಾಗಿ ಮಾತನಾಡ ತೊಡಗಿದರು. ಅಮ್ಮ ಕೆಲಸಗಳಲ್ಲಿ ತೊಡಗಿರುವ ಸಮಯಗಳಲ್ಲಿ ಅತ್ತೆಯೇ ಅನ್ನ ತಂದು ಸಂಕೋಚವಿಲ್ಲದೆ ಬಡಿಸಿ ಹಿಂತಿರುಗುವಳು. ಚಿಕ್ಕ ಅತ್ತೆಯ ಒಗಟಿನ ಹುಚ್ಚಿಗೆ ಸರಿಯಾದ ಪೈಪೋಟಿಯ ಆಸಾಮಿಯಾಗಿದ್ದರು ತೊಟ್ಟಿಯವರು. ಅವರು ಹಾಕಿದ ಒಗಟುಗಳಲ್ಲಿ ಒಂದನ್ನೂ ಅತ್ತೆಯಿಂದ ಬಿಡಿಸಲಾಗಲಿಲ್ಲ.

ಎರಡು ವಾರಗಳ ಕೊನೆಯಲ್ಲಿ ತೊಟ್ಟಿ ಪೂರ್ತಿಯಾಗಿ ತಯಾರಾಯಿತು. ಅರಮನೆಗಳಲ್ಲಿಯೂ ದೇವಸ್ಥಾನಗಳಲ್ಲಿಯೂ ಆ ಕಾಲದಲ್ಲಿ ಇದ್ದ ರಹಸ್ಯದ ಪೆಟ್ಟಿಗೆಯಂತೆ ಇತ್ತು.

"ಕೂಳು ಕಲಸಿ ಸುರಿದರೆ, ನೂರಿನ್ನೂರು ಜನ ಕುಡಿಯಬಹುದು..."